**Published by Noopura Bhramari (ನೂಪುರಭ್ರಮರಿ) – An IKS Centre (July-August 2022) As a part of Nrityashilpayatra programme (ನೃತ್ಯಶಿಲ್ಪಯಾತ್ರೆ). [www.noopurabhramari.com](http://www.noopurabhramari.com)**

# ಲೇಪಾಕ್ಷಿಯ ಕೆತ್ತನೆಗಳಲ್ಲಿ ಪ್ರಕೃತಿಯ ಸೌಂದರ್ಯದ ಪರಿಕಲ್ಪನೆ

**- ಶ್ರೀಮತಿ ರೋಹಿಣಿ ಮಂಜುನಾಥ್, ಬೆಂಗಳೂರು.**

ಶಿಲ್ಪಿಗೆ ಪ್ರಕೃತಿಯ ಸಸ್ಯವರ್ಗವು ನೆಚ್ಚಿನ ವಿಷಯವಾಗಿ ದೇವಸ್ಥಾನಗಳ ಅಲಂಕಾರಿಕ ಕೆತ್ತನೆಗೆ ಪ್ರೇರಣೆಯಾಗಬಹುದು. ಅದಕ್ಕೆ ಸಾಕ್ಷಿಯೇ ಶತಶತಮಾನಗಳಿಂದಲೂ ಭಾರತದಾದ್ಯಂತ ಮರಗಿಡಗಳನ್ನು, ಹೂವುಗಳನ್ನು, ಎಲೆಬಳ್ಳಿಗಳನ್ನು ದೇವಾಲಯಗಳ ಶಿಲ್ಪದಲ್ಲಿ ಅತಿಸುಂದರವಾಗಿ ಹಾಗು ಸೂಕ್ಷ್ಮವಾಗಿ ಕೆತ್ತಿರುವುದು. ಇವು ದೇವಾಲಯದ ಭವ್ಯತೆಗೆ ಮೆರುಗು ನೀಡಿದೆ ಕೂಡಾ.



ಹಿಂದಿನಕಾಲದಲ್ಲಿ ಪ್ರಕೃತಿಗೆ ಮಾನವನು ಕೊಡುತ್ತಿದ್ದ ಪ್ರಾಮುಖ್ಯತೆಯನ್ನು ಇಂಥ ಶಿಲ್ಪಗಳಲ್ಲಿ ಕಾಣಬಹುದು. ಅಂತೆಯೇ ವಿಜಯನಗರದ ಶಿಲ್ಪಿಗಳು ಇದಕ್ಕೆ ಹೊರತಲ್ಲ. ಆ ಪೈಕಿ ಲೇಪಾಕ್ಷಿಯ ವೀರಭದ್ರನ ಗುಡಿಯ ನಮ್ಮನ್ನು ಬೆರಗುಗೊಳಿಸುತ್ತದೆ. ಈ ದೇವಸ್ಥಾನವನ್ನು ೫ ಎಕರೆಯ ಪ್ರದೇಶದಲ್ಲಿ, ಅದೂ ಕೂರ್ಮರೂಪದಲ್ಲಿ ಇರುವ ಒಂದೇ ಬಂಡೆಯಲ್ಲಿ ಕೊರೆದು ಅಂದರೆ ಅಡಿಪಾಯವಿಲ್ಲದೆ ಕಟ್ಟಲಾಗಿದೆ. 485 ವರ್ಷಗಳ ಹಿಂದಿನ ಈ ದೇವಾಲಯವು ಪಂಚಲಿಂಗ ಕ್ಷೇತ್ರವೆನಿಸಿಕೊಂಡಿದೆ. ಒಂದೇ ಕ್ಷೇತ್ರದಲ್ಲಿ ಮೂಲ ಸ್ವಯಂಭು ಲಿಂಗ, ಅಗಸ್ತ್ಯ ಋಷಿಗಳು ಪ್ರತಿಷ್ಠಾಪಿಸಿದ ಪಾಪವಿನಾಶೇಶ್ವರ ಲಿಂಗ, ಚೋಳ ರಾಜ ಸ್ಥಾಪಿಸಿದ ತಾಂಡವೇಶ್ವರ ಲಿಂಗ, ರಾಮ ಹನುಮರು ಸ್ಥಾಪಿಸಿರುವ ರಾಮಲಿಂಗ ಹಾಗು ಹನುಮಲಿಂಗದ ದರ್ಶನ ಭಾಗ್ಯ ಭಕ್ತರಿಗೆ ಒದಗಿಬರುತ್ತದೆ. ಇನ್ನು ಕಣ್ಮನ ಸೂರೆಗೊಳ್ಳುವಂತಹ ಇಲ್ಲಿನ ಕೆತ್ತನೆಗಳಿಗೆ ವೇ ಸರಿಸಾಟಿ. ಈ ದೇವಾಲಯವು ವಿಜಯನಗರದ ಶಿಲ್ಪ ಕಲೆಗೆ ಹಾಗು ಚಿತ್ರಕಲೆಗೆ ಅತ್ಯುತ್ತಮ ಉದಾಹರಣೆಯೇ ಸರಿ. ಈ ಕ್ಷೇತ್ರದ ಹತ್ತು ಹಲವಾರು ಅತ್ಯದ್ಭುತ ಕಥೆಗಳು, ಮಹಾಗಣಪತಿಯ ಕೆತ್ತನೆ, ಏಕಶಿಲಾ ನಾಗಲಿಂಗ, ಆಕಾಶ ಸ್ತಂಭ, ಅತಿ ಎತ್ತರದ ಏಕಶಿಲಾ ನಂದಿ, ಮೇಲ್ಛಾವಣಿಯಲ್ಲಿನ ಚಿತ್ರಕಲೆಗಳ ನಡುವೆ ಕಾಣಬರುವುದೇ ಇಲ್ಲಿನ ವೃಕ್ಷರಾಶಿಯ ವಿನ್ಯಾಸದಲ್ಲಿರುವ ಕೆತ್ತನೆಗಳ ಮಹಾಪೂರ.

ವಿಜಯನಗರ ಸಾಮ್ರಾಜ್ಯದ ಇನ್ನಿತರೇ ಜೀರ್ಣೋದ್ಧಾರವಾದ ದೇವಸ್ಥಾನಗಳಿಗಿಂತ ಇಲ್ಲಿನ ಶಿಲ್ಪಗಳು ವಿಶೇಷವಾಗಿವೆ. ಅದರಲ್ಲಿ ನನ್ನ ಗಮನ ಸೆಳೆದದ್ದು ಇದರ ಮುಖಮಂಟಪ, ಕಲ್ಯಾಣ ಮಂಟಪ ಹಾಗು ಧರ್ಮಶಾಲೆಯಲ್ಲಿರುವ ಒಟ್ಟು 876 ಕಂಬಗಳ ಮೇಲೆ ಕೆತ್ತಿರುವ ವೈವಿಧ್ಯಮಯ

Copy Protected

ರೇಖಾಚಿತ್ರಗಳು ಹಾಗೂ ವೃಕ್ಷ ಹಾಗು ಸಸ್ಯಗಳ, ಪತ್ರ, ಶಾಖಗಳ ವಿನ್ಯಾಸಗಳು. ಅಬ್ಬಾ ! ಅದ್ಭುತ! ಈ ದೇವಸ್ಥಾನದಲ್ಲಿ ಗೈಡ್ ಆಗಿರುವ ವಿರೂಪಣ್ಣನವನವರ ಅಭಿಪ್ರಾಯದಂತೆ ಇಲ್ಲಿ ಸುಮಾರು 730 ವಿವಿಧ ರೀತಿಯ ವಿನ್ಯಾಸಗಳಿವೆ ಹಾಗು ಅವುಗಳು ಎಲ್ಲವು ಒಂದಕ್ಕಿಂತ ಮತ್ತೊಂದು ವಿಭಿನ್ನ! ಶಿಲ್ಪಿಯ ಈ ಕಲಾಚಾತುರ್ಯವನ್ನು ಮೆಚ್ಚಬೇಕಾದ್ದೇ.



ಪಾಣಿನಿಯ ಅಷ್ಟಾಧ್ಯಾಯಿಯಲ್ಲಿ, ಮನರಂಜನೆ ಅಥವಾ ಸಾಲವೃಕ್ಷಗಳ ಉದ್ಯಾನದಲ್ಲಿ ಆಡುವ ಆಟವನ್ನು ಸಾಲಭಂಜಿಕ ಎಂದು ಸೂಚಿಸಲಾಗಿದೆ. ಈ ಆಟದಲ್ಲಿ ಸುಂದರ ಯುವತಿಯರು ಸಾಲ ಮರದ ಕೊಂಬೆಗಳನ್ನು ಬಾಗಿಸಿ, ಹೂವುಗಳನ್ನು ಕಿತ್ತು ಪರಸ್ಪರ ಎಸೆಯುತ್ತಾರೆ. ಹತ್ತನೇ ಶತಮಾನದ ಹೊತ್ತಿಗೆ ಈ ಪರಿಕಲ್ಪನೆ ಆಟಕ್ಕೆ ಸೀಮಿತವಾಗದೆ ಕಾವ್ಯಗಳಲ್ಲಿ ಇದರ ಅರ್ಥ ಓರ್ವ ಸುಂದರ ಸ್ತ್ರೀಯ ಶಿಲ್ಪವನ್ನು ಸಾಲಭಂಜಿಕೆ ಎಂಬಷ್ಟಕ್ಕೆ ಮಾತ್ರ ಸೀಮಿತಗೊಳಿಸಿದ್ದು ಕಂಡುಬರುತ್ತದೆ. ದಕ್ಷಿಣಭಾರತದಲ್ಲಿ, 15ನೇ ಶತಮಾನದ ವೇಳೆಗೆ, ಅದರಲ್ಲೂ ವಿಜಯನಗರ ಸಾಮ್ರಾಜ್ಯ ಮತ್ತು ಅದರ ನಂತರದ ಅವಧಿಗಳಲ್ಲಿ, ಲತಾ-ಸುಂದರಿಗಳ ಶಿಲ್ಪಗಳಿದ್ದು ಇವುಗಳನ್ನು ಸಾಲಭಂಜಿಕೆ ಶಿಲ್ಪಗಳಿಗೆ ಸಮೀಕರಿಸಬಹುದು. ಕೆಲವು ಸಾಲಭಂಜಿಕಾ ಶಿಲ್ಪಗಳಲ್ಲಿ, ಅಶೋಕ ಹಾಗು ಮಾವಿನ ಮರ ಕೂಡ ಕಂಡುಬರುತ್ತದೆ.

ಸಾಲಭಂಜಿಕಾ ಶಿಲ್ಪಕ್ಕೆ ಸಂಬಂಧಪಟ್ಟಂತೆ ಇಲ್ಲಿ ಇನ್ನೊಂದು ವಿಷಯದ ಉಲ್ಲೇಖವನ್ನು ಮಾಡಲು ಇಚ್ಛಿಸುತ್ತೇನೆ. ಶಿಲ್ಪಿಗಳು ಕಾವ್ಯದಲ್ಲಿರುವ ಅಶೋಕದೋಹದ ಎಂಬ ಪರಿಕಲ್ಪನೆಯನ್ನು ಕೂಡಾ ಸೂಚಿಸಿದ್ದಾರೆ. ದೋಹದ ಎಂಬುದು ಸುಂದರ

Copyright Pr

ಯುವತಿಯರ ಸ್ಪರ್ಶ ಅಥವಾ ಸಾಮೀಪ್ಯದ ಮೂಲಕ ಸಸ್ಯಗಳು ಅದರಲ್ಲೂ ಅಶೋಕ ವೃಕ್ಷವು ಫಲಪುಷ್ಪ ಸಮೃದ್ಧಿಯನ್ನು ಪಡೆಯುವುದರ ಆಚರಣೆಯಾಗಿದೆ. ರಾಜಶೇಖರನ ಕರ್ಪೂರಮಂಜರಿ ಎಂಬ ಕಾವ್ಯದಲ್ಲಿ ಕರ್ಪೂರಮಂಜರಿಯು, ಕುರವಕ ಮರವನ್ನು ಆಲಿಂಗಿಸಿ ತುದಿಗಾಲಿನಿಂದ ಸ್ಪರ್ಶಮಾಡಿದಾಗ ಆ ಮರವು ಸುಗಂಧ ಭರಿತವಾದ ಪುಷ್ಪದಿಂದ ತುಂಬಿತು ಎಂದೂ; ಮುಂದೆ ಇದೇ ಕಾವ್ಯದಲ್ಲಿ ರಾಜಶೇಖರನು ಓರ್ವ ಸುಂದರ ಯುವತಿಯು ತನ್ನ ತುದಿಗಣ್ಣ ನೋಟದಿಂದ ತಿಲಕದ



ಮರ ನೋಡಿದಾಗ ಹೇಗೆ ಆ ಮರವು ಹೂಗೊಂಚಲಿನಿಂದ ತುಂಬಿತು ಎಂಬುದಾಗಿ ವರ್ಣಿಸುತ್ತಾನೆ. ಕಾಳಿದಾಸನೂ ಸಹ, ಸುಂದರ ಕನ್ಯೆಯ ಬಾಯಿಂದ ಚಿಮ್ಮಿದ ದ್ರಾಕ್ಷಾರಸದಿಂದ ಹೇಗೆ ಬಕುಳಾ ಮರದಲ್ಲಿ ಹೂಗಳು ಅರಳಿದವು ಎಂದು ವರ್ಣಿಸಿದ್ದಾನೆ. ಹೀಗೆ ಇನ್ನು ಎಷ್ಟೋ ಕವಿಮಾನ್ಯರು ತಂತಮ್ಮ ಕಾವ್ಯಗಳಲ್ಲಿ ದೋಹದ ಪದ್ಧತಿಯನ್ನು ವೈವಿಧ್ಯಮಯವಾಗಿ ವರ್ಣಿಸಿದ್ದಾರೆ. ಈ ಆಚರಣೆಯು ಕಾಲಾನಂತರದಲ್ಲಿ ಸಾಲಭಂಜಿಕಾ ಶಿಲ್ಪಗಳಲ್ಲಿ ಅಲಂಕಾರಿಕವಾಗಿ ಉಳಿದುಬಂದಿದೆ.

ಸಾಲಭಂಜಿಕೆಯ ಮೇಲೆ ಕೆತ್ತಲಾದ ಮರದ ರೆಂಬೆಗಳ ಆಕಾರಗಳನ್ನು ಶಾಖಾ ಎಂದು ಕರೆಯಲಾಗುತ್ತದೆ. ಇವು ಹಲವಾರು ಶಾಖೆಗಳನ್ನು ಒಳಗೊಂಡಿರುತ್ತವೆ – ಮೂರು (ತ್ರಿಶಾಖಾ), ನಾಲ್ಕು (ಚತುಷ್ಶಾಖಾ), ಐದು (ಪಂಚಶಾಖಾ), ಏಳು (ಸಪ್ತಶಾಖಾ) ಅಥವಾ ಒಂಬತ್ತು (ನವಶಾಖಾ). ಹಿಂದಿನಕಾಲದಲ್ಲಿ ಗರ್ಭಗುಡಿಯ ದೇವರಿಗೆ ದ್ವಾರವನ್ನು ರಚಿಸಲು ಇಂಥ ಹಲವಾರು ಶಾಖೆಗಳನ್ನು ಒಟ್ಟಿಗೆ ಹಿಡಿದು ಜೋಡಿಸಲಾಗುತ್ತಿತ್ತಂತೆ ! ಕಾಲಕ್ರಮೇಣ ಅವೇ ದ್ವಾರಶಾಖಾಗಳಾಗಿ ರೂಪುಗೊಂಡಿವೆ. ಈ ಶಾಖೆಗಳಲ್ಲಿ ಸಂಗೀತ, ವಾದ್ಯ ಹಾಗು ನೃತ್ಯದ ಕಲಾವಿದರು ಸಂಭ್ರಮಿಸುತ್ತಿರುವುದನ್ನು ನೋಡಬಹುದು.

ಲೇಪಾಕ್ಷಿ ದೇವಸ್ಥಾನದಲ್ಲಿ ಹೆಚ್ಚಾಗಿ ಕಾಣುವ ಪುಷ್ಪವಿನ್ಯಾಸವೆಂದರೆ ಕಮಲ. ಈ ಪುಷ್ಪವನ್ನು ವಿಭಿನ್ನ ಸಂದರ್ಭಗಳಲ್ಲಿ ಬಳಸಲಾಗಿದೆ. ಅಂದರೆ – ದೇವತೆಗಳ ಪೀಠದಲ್ಲಿ, ಯಕ್ಷರ ಕೈಯಲ್ಲಿ ಮತ್ತು ಕಂಬಗಳ ವಿನ್ಯಾಸದಲ್ಲಿ.. ಹೀಗೆ. ಅದರಲ್ಲೂ ದೇವಾಲಯದ ಒಳಗೆ ಮೇಲ್ಛಾವಣಿಯ ಭುವನೇಶ್ವರಿಯಲ್ಲಿ ಶತಪತ್ರಕಮಲದ ಸುಮನೋಹರವಾದ ಕೆತ್ತನೆಯನ್ನು ಗಮನಿಸಬಹುದು. ಭಾರತೀಯ ಅಲಂಕಾರಿಕ ಲಕ್ಷಣಗಳಲ್ಲಿ, ಸಾಂಪ್ರದಾಯಿಕ ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಹೆಚ್ಚಾಗಿ ಬರುವ ಚಿಹ್ನೆಗಳು ಮತ್ತು ಸಾಧನಗಳಲ್ಲಿ, ಕಮಲದ ಪುಷ್ಪದ ಕೆತ್ತನೆ ಅತ್ಯಂತ ಜನಪ್ರಿಯ ಸ್ಥಾನವನ್ನು ಪಡೆದುಕೊಂಡಿದೆ. ಏಕೆಂದರೆ ಹಲವು ದಳಗಳ ಕಮಲವು ಸೌಂದರ್ಯ ಮತ್ತು ಸಮೃದ್ಧಿಯ ಸಂಕೇತವಾಗಿದೆ.





ಸದಾಪುಷ್ಪ, ಸೇವಂತಿ, ಚೆಂಬಳ್ಳಿಯಂತಹ ಬಳ್ಳಿಗಳು ಹಾಗೂ ಇನ್ನೂ ಹತ್ತುಹಲವಾರು ಹೂವುಗಳು ಶಿಲ್ಪಗಳಲ್ಲಿ ಕಂಡುಬರುತ್ತವೆ. ಔದುಂಬರ, ಅರಳಿ, ಸಾಲ ಮರ, ಬಿಲ್ವ, ತಾಳೆ ಮುಂತಾದವುಗಳನ್ನೂ ಸಹ ಕೆತ್ತನೆಗಳಲ್ಲಿ ಕಾಣಬಹುದು. ಕೆಲವು ಶಿಲ್ಪಗಳು ಬಾಳೆಯಂತಹ ಸಸ್ಯಗಳ ರಚನೆಯನ್ನು ಹೊಂದಿವೆ. ಬಹುಷಃ ಇದು ಆ ಅವಧಿಯಲ್ಲಿದ್ದಿರಬಹುದಾದ ಸಮೃದ್ಧ ಕೃಷಿಯ ಪ್ರತೀಕ.



ಗ್ರಾಮೀಣ ಭಾರತದಲ್ಲಿ ತೆಂಗು, ತಾಳೆ, ಬಾಳೆ, ಆಲ ಮತ್ತು ಬಿಲ್ವ ಮರಗಳ ಆರಾಧನೆಯನ್ನು ಈಗಲೂ ಕಾಣಬಹುದು. ಈ ಮರಗಳನ್ನು ವಿವಿಧ ಕಾರಣಗಳಿಗಾಗಿ ಪವಿತ್ರವೆಂದು ಪರಿಗಣಿಸಲಾಗುತ್ತದೆ. ಈ ಎಲ್ಲಾ ಸಂಪ್ರದಾಯಗಳು ಸ್ವಾಭಾವಿಕವಾಗಿ ಭಾರತೀಯ ಕಲೆಯಲ್ಲಿ ಹರಡಿಕೊಂಡಿವೆ. ಅಲ್ಲದೆ ಪ್ರಕೃತಿಯ ಮೇಲೆ ಮಾನವನ ಅವಲಂಬನೆಯನ್ನೂ ಸೂಚಿಸುತ್ತದೆ.



ಈ ಕೆತ್ತನೆಯಲ್ಲಿ ಎಲೆಯ ಜೀವನ ಚಕ್ರವನ್ನು ಕಾಣಬಹುದು. ಇದು ಚಿಗುರೆಲೆಯಿಂದ ಪ್ರಾರಂಭಗೊಂಡು ಪಕ್ವವಾದ ಎಲೆಯ ಹಂತಕ್ಕೆ ತಲುಪಿರುವ ಚಿತ್ರಣ.


ಒಟ್ಟಿನಲ್ಲಿ ಶಿಲ್ಪಗಳಲ್ಲಿ ಬಿಂಬಿತವಾದ ಸಸ್ಯಗಳ ಮೇಲೆಯೂ ಅಧ್ಯಯನವನ್ನು ನಡೆಸಿದರೆ ಆ ಕಾಲದ ಸಸ್ಯವರ್ಗವನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ವಿಶೇಷವೆಂದರೆ ಈ ದೇವಾಲಯದ ಕೆತ್ತನೆಗಳು ಜನಸಾಮಾನ್ಯರನ್ನು ಆಕರ್ಷಿಸುವುದಲ್ಲದೆ ನೇಕಾರರಿಗೂ ಸ್ಫೂರ್ತಿಯಾಗಿದೆ. ಇಲ್ಲಿರುವ ವಿನ್ಯಾಸಗಳನ್ನು ಧರ್ಮಾವರಂ ಸೀರೆಗಳಲ್ಲಿ ಅಳವಡಿಸಿ ನಮ್ಮ ಶಿಲ್ಪಕಲೆಯ ಇತಿಹಾಸವನ್ನು ಸಾಮಾನ್ಯ ಜನರ ಮನೆಮನೆಗೂ ತಲಪುವಂತೆ ಮಾಡಿದ್ದಾರೆ. ಇಂತಹ ಶಿಲಾಕೌಶಲಗಳಿಗೆ ನೆಲೆಯಾಗಿರುವ ನಮ್ಮ ನಾಡೇ ಧನ್ಯ, ನಾವುಗಳೇ ಕೃತಾರ್ಥರು.

## Reference :


1. Flora in Indian art : depictions in sculpture | historyreads (wordpress.com)
2. Salabhanjika: The Tree Deity – The Custodians (wordpress.com)
3. Association of Plants and Sculptures during Hoysaḷa www.iosrjournals.org https://www.iosrjournals.org/iosr-jhss/papers/Vol20-issue10/Version-2/G0201024451.pdf
4. Door Frame Designs on Nagara Temples | Sahapedia
5. https://www.facebook.com/109290314279192/posts/dohada-the-festival-of-trees-and-flowersin-ancient-punjab-trees-were-the-importa/150271233514433/


Copyright Protected

## ಲೇಖಿಕೆಯ ಪರಿಚಯ : ಶ್ರೀಮತಿ ರೋಹಿಣಿ ಮಂಜುನಾಥ್



ಭರತನಾಟ್ಯದಲ್ಲಿ ಅಪಾರ ಆಸಕ್ತಿ ಹೊಂದಿರುವ ಶ್ರೀಮತಿ ರೋಹಿಣಿ ಮಂಜುನಾಥ್ ಚಿಕ್ಕಂದಿನಿಂದಲೇ ಗುರು ಡಾ ಹೇಮಾ ಗೋವಿಂದರಾಜನ್ ಬಳಿ ನೃತ್ಯಾಭ್ಯಾಸವನ್ನು ಪ್ರಾರಂಭಿಸಿ ಅವರ ಸಮರ್ಥ ಮಾರ್ಗದರ್ಶನದಲ್ಲಿ ಭರತನಾಟ್ಯ ಜೂನಿಯರ್ ಮತ್ತು ಸೀನಿಯರ್ ನೃತ್ಯ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ತಮ್ಮ 15 ನೇ ವಯಸ್ಸಿನಲ್ಲಿಯೇ ರಂಗಪ್ರವೇಶವನ್ನು ಪೂರೈಸಿದ್ದಾರೆ. ನಂತರ ಕರ್ನಾಟಕ ಕಲಾಶ್ರೀ, ಶಾಂತಲಾ ಪ್ರಶಸ್ತಿ ಪುರಸ್ಕೃತ ಗುರು ಬಿ ಭಾನುಮತಿ ಅವರ ಬಳಿ ಭರತನಾಟ್ಯದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಪ್ರಸ್ತುತ ಗುರು ಶ್ರೀಮತಿ ಶೀಲಾ ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಅಭಿನಯ ಮತ್ತು ಶಾಸ್ತ್ರದ ಅಂಶಗಳಲ್ಲಿ ತರಬೇತಿಯನ್ನು ಪಡೆಯುತ್ತಾ ತಮ್ಮ ನೃತ್ಯ ಪಯಣವನ್ನು ಮುಂದುವರೆಸಿದ್ದಾರೆ. ಬಿ.ಕಾಂ ಪದವಿಯ ನಂತರ ಚಿದಂಬರಂನ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಭರತನಾಟ್ಯದಲ್ಲಿ ಮಾಸ್ಟರ್ ಆಫ್ ಫೈನ್ ಆರ್ಟ್ಸ್ ಪದವಿಯನ್ನು ಪಡೆದಿದ್ದಾರೆ. ಬೆಂಗಳೂರಿನಲ್ಲಿ ತಮ್ಮದೇ ನೃತ್ಯ ಶಾಲೆಯಲ್ಲಿ ಹಲವಾರು ಪ್ರತಿಭಾವಂತ ಯುವ ಕಲಾವಿದರಿಗೆ ಭರತನಾಟ್ಯ ತರಬೇತಿಯನ್ನು ಸಹಾ ನೀಡುತ್ತಿದ್ದಾರೆ. ಇವರು ಗುರು ವಿದುಷಿ ಎಚ್ ಗೀತಾರವರ ಹಿರಿಯ ವಿದ್ಯಾರ್ಥಿನಿಯಾಗಿ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸಮಾಡುತಿದ್ದರೆ. ವಿದ್ವಾನ್ ಎನ್ ನಾರಾಯಣಸ್ವಾಮಿ ಅವರ ಬಳಿ ನಟ್ಟುವಾಂಗಮ್ ಅಭ್ಯಾಸ ಮಾಡುತ್ತಿದ್ದಾರೆ. **ಪ್ರಸ್ತುತ ಇವರು ನೂಪುರಭ್ರಮರಿ ಸಂಸ್ಥೆಯ 'ನೃತ್ಯಶಿಲ್ಪಯಾತ್ರೆ' ಅಧ್ಯಯನ ತರಬೇತಿಯನ್ನು (ಇಂಟರ್ನ್ ಶಿಪ್) ಪಡೆಯುತ್ತಿದ್ದಾರೆ.**

Copyright Protected